ಅಬಕಾರೀ ಖಾತೆಯ ಅಮಲದಾರರಿಗೆ ಸೂಚನೆಗಳು.

ಅಬಕಾರೀ ಖಾತೆಯವರು, ಗ್ರಾಮಸುಧಾರಣೆಗೆ ಸಂಬಂಧಿಸಿದ ಶಾಸ್ತ್ರೀಯ ಸ್ವರೂಪದ ಬಾಬತುಗಳಲ್ಲಿ ಯಾವದೇ ಮಹತ್ವದ ಸಹಾಯವನ್ನು ಮಾಡುವ ಸ್ಥಿತಿಯಲ್ಲಿರುವರೆಂದು ಅನ್ನಲಿಕ್ಕೆ ಬರುವದಿಲ್ಲ, ಮತ್ತು, ಇದರ ಹೊರ್ತಾಗಿ, ಈಜೆ ಗಿನ ವರ್ಷಗಳಲ್ಲಿ ಅಬಕಾರೀ ಅಮಲದಾರರನ್ನು ಕಡಿಮೆ ಮಾಡಿದ್ದರಿಂದಲೂ, ಅಂಶತಃ ಅನುಸರಿಸಿದ ಮದ್ಯ ಪ್ರತಿಬಂಧಕ ಧೋರಣದಿಂದ ಮತ್ತು, ತೀರ ಇತ್ತಲಾಗಿ, ದಿವಾಣೀ ಕಾಯದೆಭಂಗದ ಚಳವಳಿಯಿಂದ ಉಂಟಾದ ಅಬಕಾರೀ ಗುನ್ಹೆಗಳಲ್ಲಿಯ ಅತೀವ ಬೆಳವಣಿಗೆಯಿಂದಲೂ, ಉಳಿದ ನೌಕರರ ಮೇಲೆ ಬಹಳೇ ಕೆಲಸವು ಬಿದ್ದಿರುತ್ತದೆ.

ಆದ್ದರಿಂದ, ಅಬಕಾರೀ ಅಮಲದಾರರು ಈ ಯೋಜನೆಗೆ ಮಹತ್ವದ ಸಹಾಯವನ್ನು ಮಾಡುವ ಸಂಧಿಗಳು ಅನೇಕವಿರಲಾರವು. ಆದಾಗ್ಯೂ, ಇದರ ಹೊರ್ತಾಗಿ, ಯಾವತ್ತು ದರ್ಜೆಗಳ ಅಮಲದಾರರು, ಅವರ ನಿಯಮಿತ ಕರ್ತವ್ಯ ಗಳಿಗೆ ಬಾಧೆ ಬಾರದ ಮಟ್ಟಿಗೆ, ಈ ಯೋಜನೆಯ ಉದ್ದೇಶವನ್ನು ಮುಂದರಿಸಲಿಕ್ಕೆ ಸಹಾನುಭೂತಿಯಿಂದ ಪ್ರಯತ್ನಿಸಬೇಕಾದ ಸಂಧಿಗಳು ಉಂಟಾಗಬಹುದು.

ಆದ್ದರಿಂದ ಅವರು, ಈ ಹೊಸ ಸಂಘಟನೆಯ ಸಂಬಂಧದ ಪುಸ್ತಕಗಳ ಮತ್ತು ಕಾರ್ಯಕ್ರಮಗಳ ಮಾಹಿತಿಯನ್ನು ಪಡಕೊಂಡು ಅವುಗಳಲ್ಲಿ ಉತ್ಸುಕತೆ ಯನ್ನು ತೋರಿಸಬೇಕು, ಮತ್ತು ತಮಗೆ ಅನುಕೂಲ ಸಂಧಿಯು ಕಂಡುಬಂದಾಗ್ಗೆಲ್ಲ, ಸದರಿ ಯೋಜನೆಯನ್ನು ಕೈಕೊಳ್ಳಲಿಕ್ಕೆ ಗ್ರಾಮನಿವಾಸಿಗಳಿಗೆ ತಿಳಿಸಬೇಕು.

ವಿಶೇಷವಾಗಿ, ಸದರಿ ಯೋಜನೆಯನ್ವಯ ಸ್ಥಾಪಿಸಲ್ಪಟ್ಟ ಭಾಗದ, ಜಿಲ್ಲೆಯ ಮತ್ತು ಗ್ರಾಮದ ಕಮಿಟಿಗಳು ಅಥವಾ ಮಂಡಳಗಳು, ಮತ್ತು ಅಬಕಾರೀ ಅಮಲ ದಾರರು, ಸರಾಯಿ ಮತ್ತು ಮಾದಕ ದ್ರವ್ಯಗಳನ್ನು ಬೇಕಾಯದೆಶೀರವಾಗಿ ಅಮದು ಮಾಡುವದು, ಬೇಕಾಯದೆಶೀರವಾಗಿ ಸರಾಯಿ ಮಾಡುವದು, ಲೈಸೆನ್ಸದಾರರಿಗೆ ಅಡ್ಡಿ ಮಾಡುವದು ಮುಂತಾದ ಅಬಕಾರೀ ಗುನ್ಹೆಗಳನ್ನು ಪ್ರತ್ಯಕ್ಷವಾಗಿ ವಿರೋಧಿಸ ಲಿಕ್ಕೆ ಮತ್ತು ಬಂದ ಮಾಡಲಿಕ್ಕೆ ತಮಗೆ ಶಕ್ಯವಿದ್ದದ್ದನ್ನೆಲ್ಲ ಮಾಡಬೇಕೆಂದು ಗ್ರಾಮನಿವಾಸಿಗಳಿಗೆ ಒತ್ತಿ ಹೇಳಬೇಕು, ಮತ್ತು ಸಾರ್ವಜನಿಕ ನೀತಿಯಲ್ಲಿಯ ಅಧೋಗತಿ, ಕಾಯದೆಯನ್ನು ಉಲ್ಲಂಘಿಸುವದು, ಕುಡುಕತನ ಮತ್ತು ಸಾರ್ವಜನಿಕ ಹಣದ ಲುಕ್ಸಾನ ಇವುಗಳು ಇಂಥ ಗುನ್ಹೆಗಳ ಪರಿಣಾಮಗಳೆಂತಲೂ, ಅಬಕಾರೀ ಉತ್ಪನ್ನವು ಹೆಚ್ಚೆಚ್ಚು ಕಡಿಮೆಯಾದ ಹಾಗೆ, ಸಾರ್ವಜನಿಕ ಹಣದೊಳಗಿಂದ ಗ್ರಾಮದ ಶಾಲೆಗಳಿಗೆ, ಆರೋಗ್ಯತೆಗೆ, ವೈದ್ಯಕೀಯ ಸಹಾಯಕ್ಕೆ, ಸ್ಥಾನಿಕ ರಸ್ತೆ ಗಳಿಗೆ, ನೀರಿನ ಪುರವಠೆಗೆ ಮತ್ತು ಇತರ ಅನೇಕ ಸಾರ್ವಜನಿಕ ಕಲ್ಯಾಣದ ಕಾರ್ಯ ಗಳಿಗೆ ಸಹಾಯದ ಬಗ್ಗೆ ಗ್ರಾಂಟುಗಳನ್ನು ಕೊಡಲಿಕ್ಕೆ ದೊರೆಯಬಹುದಾದ ಹಣವು ಕಡಿಮೆಯಾಗುವದೆಂತಲೂ ಅವರಿಗೆ ತಿಳಿಸಿ ಹೇಳಬೇಕು.